ದಿ: 08-07-2019 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು : ಶ್ರೀ ಎಂ.ಎಸ್.ಎಸ್. ವಕೀಲರಿಂದ :-

1. ಈ ದಾವೆಯನ್ನು ಬೋಗಪ್ಪನ ಮಕ್ಕಳು ಸಲ್ಲಿಸಿರುತ್ತಾರೆ. ತಿಮ್ಮಣ್ಣನ ತಂದೆ ಬೋಗಪ್ಪ ಅಂದರೆ ಸರಿ. ಸದರಿ ತಿಮ್ಮಣ್ಣ ಬೋಗಪ್ಪನ ಹಿರಿಯ ಹೆಂಡತಿ ಮಗ ಅಂದರೆ ಸರಿ. 2 ನೇ ಹೆಂಡತಿಗೆ 3 ಜನ ಮಕ್ಕಳು ಅಂದರೆ ಸರಿ. 1 ನೇ ಪ್ರತಿವಾದಿಯವರ ತಂದೆ ಹನುಮಂತಪ್ಪ ನಾನು ಒಂದೇ ವಾರಿಗೆಯವರು ಅಂದರೆ ಸರಿಯಲ್ಲ. 1 ನೇ ಪ್ರತಿವಾದಿಯು ತೋಟ ಮನೆಗೆ ಓಡಾಡಿಕೊಂಡಿರುತ್ತಾರೆ ಅಂದರೆ ನನಗೆ ಗೊತ್ತಿಲ್ಲ. ಬೋಗಪ್ಪನ ಹಿರಿಯ ಹೆಂಡತಿ ಮಗ ತಿಮ್ಮಣ್ಣ ಒಬ್ಬರೇ ತನ್ನ 3 ಜನ ಸಹೋದರರಿಂದ ಭಾಗ ತೆಗೆದುಕೊಂಡು ಬೇರೆ ಆಗಿದ್ದರು ಅಂದರೆ ಸರಿಯಲ್ಲ. ಸದರಿ ತಿಮ್ಮಣ್ಣ ಒಬ್ಬನೆ ಭಾಗ ತೆಗೆದುಕೊಂಡು ಪ್ರತ್ಯೇಕವಾಗಿದ್ದರು ಅಂದರೆ ಸರಿಯಲ್ಲ. ವಾದಿಯರ ತಂದೆ ಬೋಗಪ್ಪ ಕ್ಯಾನ್ಸರ್ ನಿಂದ ತೀರಿಕೊಂಡರು ಅಂದರೆ ನನಗೆ ಗೊತ್ತಿಲ್ಲ. ವಾದಿಯರ ತಂದೆಯನ್ನು ನಾನು ನೋಡಿದ್ದೆನು. ಸದರಿ ಬೋಗಪ್ಪ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆಯುತ್ತಿದ್ದ ವಿಚಾರ ನನಗೆ ಗೊತ್ತಿಲ್ಲ. ಸದರಿ ಬೋಗಪ್ಪನವರು ಕ್ಯಾನ್ಸರ್ ಕಾಯಿಲೆಯಿಂದ ನರಳುತ್ತಿದ್ದರು ಮತ್ತು ಸಾಯುವ 2-3 ವರ್ಷಗಳಿಂದಲೂ ಹಾಸಿಗೆ ಹಿಡಿದಿದ್ದರು ಅಂದರೆ ನನಗೆ ಗೊತ್ತಿಲ್ಲ.

2. ಹನುಮಂತಪ್ಪ ಮತ್ತು ಆತನ ಸಹೋದರರು ಯಾವಾಗ ಭಾಗ ಆದರು ಎಂದು ನನಗೆ ಗೊತ್ತಿಲ್ಲ. ಯಾರು ಯಾರಿಗೆ ಯಾವ ಯಾವ ಆಸ್ತಿಗಳು ಹೋಗಿರುತ್ತವೆ ಅಂತ ನನಗೆ ಗೊತ್ತಿಲ್ಲ. ಅವರು ಯಾವ ರೀತಿಯಲ್ಲಿ ಭಾಗ ಮಾಡಿಕೊಂಡರು ಎಂದು ನನಗೆ ಗೊತ್ತಿಲ್ಲ. ಬೋಗಪ್ಪ ಸಾಯುವ ತನಕ ಸದರಿ ಬೋಗಪ್ಪ, 1 ನೇ ಪ್ರತಿವಾದಿ ಮತ್ತು ಮೃತ 2 ನೇ ಪ್ರತಿವಾದಿ ಒಟ್ಟಿಗೆ ಇದ್ದರು ಅಂದರೆ ಸರಿ. ಬೋಗಪ್ಪ ವಿಲ್ ಮಾಡಿರುವ ವಿಚಾರ ನನಗೆ ಗೊತ್ತಿಲ್ಲ. ವಿಲ್ ವಿಚಾರ ನನಗೆ ಗೊತ್ತಿರುವುದಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ ಅಂದರೆ ಸರಿ. ಬೋಗಪ್ಪನವರ ಮನೆತನದ ವಿಚಾರ ನನಗೆ ಗೊತ್ತಿಲ್ಲ. ತಿಮ್ಮಣ್ಣನ ಭಾಗವನ್ನು ಆತನ ಮಕ್ಕಳು ಅನುಭವಿಸುತ್ತಿದ್ದಾರೆ ಅಂದರೆ ನನಗೆ ಗೊತ್ತಿಲ್ಲ. ನನಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸಹ 3 ನೇ ಪ್ರತಿವಾದಿಯ ಮಾತನ್ನು ಕೇಳಿ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ)

ಓ.ಹೇ.ಕೇ.ಸ.ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊಸದುರ್ಗ